**ದಿನಾಂಕಃ 02.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಈ ದಾವೆಯನ್ನು 39 ಅಡಿ ಮತ್ತು 26 ಅಡಿಗಳ ವಿಸ್ತೀರ್ಣಗಳ ಬಗ್ಗೆಗೆ ಹೂಡಿರುತ್ತೇನೆ. ಹನುಮಂತಪ್ಪ ನನಗೆ ಮಾವನಾಗಬೇಕು ಹಾಗೂ ಹನುಮಪ್ಪ ನನ್ನ ಗಂಡ. ನನ್ನ ಗಂಡ ಹನುಮಂತಪ್ಪ ಎಂದು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆಂದರೆ ಸರಿಯಲ್ಲ. ಹನುಮಂತಪ್ಪ ರವರಿಗೆ ಮಕ್ಕಳಿರುವುದಿಲ್ಲ. ಅವರಿಗೆ ಇಬ್ಬರು ಜನ ಅಣ್ಣ-ತಮ್ಮಂದಿರಿದ್ದು, ಅವರ ತಮ್ಮರಲ್ಲಿ ಒಬ್ಬರಾದ ಪೂಜಪ್ಪರವರ ಮಗ ಹನುಮಪ್ಪ ಅವರನ್ನು ಹನುಮಂತಪ್ಪ ರವರು ಸಾಕಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರಗಳು ಆಗಿರುವುದಿಲ್ಲ.

ಹನುಮಂತಪ್ಪ ರವರ ಮನೆಯಲ್ಲಿ ನನ್ನ ಯಜಮಾನರು ಮತ್ತು ನಾವು ವಾಸಿಸುತ್ತಿದ್ದ ಅದರ ಮೇಲೆ ಖಾತೆಯನ್ನು ಮಾಡಿಸಿಕೊಂಡಿರುತ್ತೇನೆ. ದಿ.02.05.1961 ರಲ್ಲಿ ಗಿಡ್ಡಪ್ಪರವರಿಂದ ಹನುಮಂತಪ್ಪ ರವರು ಪೂರ್ವ-ಪಶ್ಚಿಮ 12 ಗಜ ಹಾಗೂ ಉತ್ತರ-ದಕ್ಷಿಣ 8 ಗಜವನ್ನು ಖರೀದಿ ಮಾಡಿರುತ್ತಾರೆ. ಅದು ಅಡಿಗಳಲ್ಲಿ ಪೂರ್ವ-ಪಶ್ಚಿಮ 36 ಹಾಗೂ ಉತ್ತರ-ದಕ್ಷಿಣ 24. ನಮ್ಮ ಅಳತೆಯನ್ನು ಮೀರಿ ಪೂರ್ವ-ಪಶ್ಚಿಮ 3 ಅಡಿ ಹಾಗೂ ಉತ್ತರ-ದಕ್ಷಿಣ 2 ಅಡಿ ಹೆಚ್ಚಿಗೆ ಬರೆಸಿರುತ್ತೇವೆಂದರೆ ಪಂಚಾಯಿತಿಯವರು ಅಳತೆ ಮಾಡಿ ಬರೆದಿರುತ್ತಾರೆ.

ದಿ.22.04.1987 ರಲ್ಲಿ ನನ್ನ ಮಾವನವರು ಪ್ರತಿವಾದಿಯ ಹೆಸರಿಗೆ ಅವರ ಸ್ವತ್ತಿನ ದಕ್ಷಿಣದ ಭಾಗಕ್ಕೆ ಪೂರ್ವ-ಪಶ್ಚಿಮ 12 ಅಡಿ, ಉತ್ತರ-ದಕ್ಷಿಣ 24 ಅಡಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆಂದರೆ ಅದರೆ ಬಗ್ಗೆ ಗೊತ್ತಿರುವುದಿಲ್ಲ. ನನ್ನ ಸ್ವತ್ತಿನ ದಕ್ಷಿಣದ ಭಾಗಕ್ಕೆ ಪ್ರತಿವಾದಿಯ ಸ್ವತ್ತು ಇರುತ್ತದೆ ಎಂದರೆ ಸರಿ. ಸದರಿ ಕ್ರಯಪತ್ರಕ್ಕೆ ನನ್ನ ಯಜಮಾನರಾ ಸಹ ಸಾಕ್ಷಿಯಾಗಿ ಸಹಿ ಹಾಕಿರುತ್ತಾರೆಂದರೆ ಸರಿಯಲ್ಲ. ನಮ್ಮ ಸ್ವತ್ತಿನಲ್ಲಿ ನಾವು ಮನೆಯನ್ನು ಕಟ್ಟಿರುತ್ತೇವೆ. ಸದರಿ ಮನೆಯನ್ನು 1987 ರಲ್ಲಿ ಪ್ರತಿವಾದಿಯು ಖರೀದಿಸುವ ಮುನ್ನವೆ ಕಟ್ಟಲಾಗಿರುತ್ತದೆ. ಸದರಿ ಕ್ರಯಪತ್ರದಲ್ಲಿ ಪ್ರತಿವಾದಿಯು ಅಂಟುಗೋಡೆಯು ಪೂರ್ವದಲ್ಲಿರುವ ಮನೆಯ ಗೋಡೆಯ ಅಂಟಿಕೊಂಡು ಗೋಡೆ ಕಟ್ಟಲು ಪರವಾನಿಗೆ ನೀಡಿ ಪತ್ರ ಬರೆಸಿರುತ್ತಾರೆಂದರೆ ಸರಿಯಲ್ಲ.

ಪಶ್ಚಿಮದ ಕಡೆಗೆ ಇರುವ ನಮ್ಮ ಮನೆಯ ಗೋಡೆಯ 1 ಕಾಲು ಅಡಿ ಇರುತ್ತದೆ. ಸದರಿಕ ಗೋಡೆಗೆ ನಾವು ಯಾವುದೆ ಕಿಟಕಿ, ದೋಣಿ, ಬಾಗಿಲು ಇತ್ಯಾದಿಗಳನ್ನು ಇಟ್ಟಿರುವುದಿಲ್ಲ. ಗೋಡೆಯ ನಂತರದಲ್ಲಿ ಪೂರ್ವ-ಪಶ್ಚಿಮ 7 ಅಡಿ, ಉತ್ತರ-ದಕ್ಷಿಣ 10 ಅಡಿ ಖಾಲಿ ಜಾಗವನ್ನು ಬಿಟ್ಟುಕೊಂಡಿರುತ್ತೇವೆ. ನಮ್ಮ ಜಾಗದಲ್ಲಿ ನಾವು ಪೂರ್ವ-ಪಶ್ಚಿಮ 32 ಅಡಿ, ಉತ್ತರ-ದಕ್ಷಿಣ 18 ಅಡಿಯಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತೇವೆ.

2018 ರಲ್ಲಿ ಪ್ರತಿವಾದಿಯರು ಮೆಟ್ಟಲ್ಲನ್ನು ಹಾಕಿಕೊಂಡಿರುತ್ತಾರೆ. ನಮ್ಮ ಗೋಡೆಗೆ ಅಂಟಿಕೊಂಡು 2 ಮಹಡಿಗಳಿಗೆ ಹೋಗಲು ಹಾಕಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ

ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ನಮ್ಮ ಮನೆಯು ರಾಜಘಟ್ಟ ಪಂಚಾಯಿತಿಯ ವ್ಯಾಪ್ತಿಗೆ ಬರುತ್ತದೆ. ಪಂಚಾಯಿತಿಗೆ ದೂರನ್ನು ನೀಡಿರುವುದಿಲ್ಲ. ನಾವು ನಮ್ಮ ಹಾಗೂ ಪ್ರತಿವಾದಿಯ ಸ್ವತ್ತನ್ನು ಅಳತೆ ಮಾಡಿಸಿರುವುದಿಲ್ಲ. ಪ್ರತಿವಾದಿಯು ಪೂರ್ವ-ಪಶ್ಚಿಮ 7 ಅಡಿ, ಉತ್ತರ-ದಕ್ಷಿಣ 10 ಅಡಿಗಳ ಜಾವನ್ನು ನಮ್ಮ ಸ್ವತ್ತಿನಲ್ಲಿ ಒತ್ತುವರಿ ಮಾಡಿರುತ್ತಾರೆ. ಪ್ರತಿವಾದಿಯು ನಿಖರವಾಗಿ ನಾನು ಹೇಳಿದ ರೀತಿಯಲ್ಲಿ ಜಾಗದಲ್ಲಿ ಒತ್ತುವರಿ ಮಾಡಿರುತ್ತಾರೆಂದು ದಾಖಲೆಯನ್ನು ಇರುವುದಿಲ್ಲ. ಪ್ರತಿವಾದಿಗೆ ದಾವೆಯನ್ನು ಹೂಡುವ ಮೊದಲು ನೋಟಿಸನ್ನು ನೀಡಿರುವುದಿಲ್ಲ.

ನಾವು ಇರುವ ಸ್ವತ್ತು ನಮಗೆ ಸೇರಿದ್ದಾಗಿರುವುದಿಲ್ಲ, ಅದು ಹನುಮಂತಪ್ಪರವರ ಅವರ ಅಣ್ಣ ತಮ್ಮಂದಿರಿಗೆ ಸೇರಿದ್ದ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ಮನೆ ಕಟ್ಟಲು ಸರ್ಕಾರದಿಂದ ಮಂಜೂರಾತಿಯಾದ ಸಮಯದಲ್ಲಿ ನಮ್ಮ ಹೆಸರಿಗೆ ಸ್ವತ್ತು ಖಾತೆಯಾಗಿರುತ್ತದೆ.

ನಾನು ಸುಳ್ಳು ಚೆಕ್ಕ ಬಂದಿ ಹಾಗೂ ಸುಳ್ಳು ಅಳತೆಯನ್ನು ತೋರಿಸಿ ದಾವೆಯನ್ನು ಹೂಡಿರುತ್ತೇನೆಂದರೆ ಸರಿ. ಪ್ರತಿವಾದಿಯು ನನ್ನ ಮಾವನಿಂದ ಖರೀದಿಸಿದ ಜಾಗಕ್ಕೂ ನಮಗೂ ಹಾಗೂ ಪೂರ್ವ-ಪಶ್ಚಿಮ 12 ಅಡಿ, ಉತ್ತರ-ದಕ್ಷಿಣ 24 ಅಡಿ ಸದರಿ ವಿಸ್ತೀರ್ಣಕ್ಕೂ ಸಂಬಂಧಿವಿರುವುದಿಲ್ಲವೆಂದರೆ ಸರಿ. ಪ್ರತಿವಾದಿಯ ಸ್ವತ್ತಿನ ಪೂರ್ಕ್ವೆ ನಮ್ಮ ಸ್ವತ್ತು, ಪಶ್ಚಿಮದ ಕಡೆಗೆ ಗೊತ್ತಿರುವುದ್ಲಿ, ಉತ್ತರ ಹಾಗೂ ದಕ್ಷಿಣ್ಕೆ ರಸ್ತೆ ಇರುತ್ತದೆ. ಪ್ರತಿವಾದಿಗೆ ಕ್ರಯಕ್ಕೆ ಕೊಟ್ಟ ಉಳಿದ ಸ್ವತ್ತು ನಮ್ಮದ್ದಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಯು ಖರೀದಿಸಿದ ಸ್ವತ್ತಿಗೆ ಹಾಗೂ ನಮಗೆ ಸಂಬಂಧವಿರುವುದಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಯ ಸ್ವತ್ತನ್ನು ಒತ್ತುವರಿ ಮಾಡಿರುವುದಿಲ್ಲ ನಾನು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**